ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಗೇಮ್ ಆಡುವುದಕ್ಕೂ, ಡಬ್ಬಲ್ ಗೇಮ್ ಆಡುವುದಕ್ಕೂ ವ್ಯತ್ಯಾಸವೇನು ಗುರುಗಳೇ?*



ಕ್ಯಾಚ್ ಹಿಡಿಯುವುದು ಗೇಮ್; ಬೆಟ್ಟಿಂಗ್‌ಗಾಗಿ ಕ್ಯಾಚ್ ಬಿಡುವುದು ಡಬಲ್ ಗೇಮ್!

ಮಂಜಪ್ಪ ಎ.ಡಿ. ಚನ್ನಗಿರಿ
*ನಿಮ್ಮಂತೆ ನಾನೂ ಉತ್ತರವನ್ನು ಪೇಪರಿನಲ್ಲಿ ಹೇಳಬೇಕೆಂದಿದ್ದೇನೆ. ಇದಕ್ಕೆ ನಿಮ್ಮ ಸಲಹೆ ಏನು?*
ಗುಡ್; ಆದರೆ ಉತ್ತರಗಳು ನಿಮ್ಮ ಹೆಸರಿನಂತೆ ಮಂಜಾಗಿರದೆ ಇನಿಷಿಯಲ್ ಆದ ಏಡಿಯಂತೆ ಕುಟುಕಿದರೆ ಚೆನ್ನ!

ನವಿರವಿ, ಬಾಳೇಹೊನ್ನೂರು
*ಮುಂಬಾಗಿಲ ಹೊಸ್ತಿಲನ್ನೇ ಏಕೆ ಪೂಜಿಸಬೇಕು?*
ಹೊಸ್ತಿಲಲ್ಲೇ ಮಲಗಿರುವ ವಾಸ್ತುಪುರುಷ ಚೆಲ್ಲಿದ ನೀರಿಗೆ ಎಚ್ಚರವಾಗಿ ಎದ್ದು ಮನೆ ಕಾಯಲೆಂದು!

ವಿಜಯ್‌ಕುಮಾರ್ ಎಂ.ಪಿ. ಲಿಂಗಸುಗೂರು
*ರಾಜಕಾರಣಿಗಳಿಗೆ ಯೂನಿಫಾರ್ಮ್ ಮಾಡಿದರೆ ಹೇಗಿರುತ್ತದೆ?*




ಜೈಲಿನ ಯೂನಿಫಾರ್ಮನ್ನೇ ನೀಡಿದರಾಯ್ತು; ಹೇಗೂ ಕಡೆಗೆ ಅಲ್ಲೇ ಹೋಗುವರಲ್ಲ!

ಗು.ರಘುನಂದನ್, ಮಂಡ್ಯ
*ಭಗವಂತನು ನಮ್ಮ ಬದುಕನ್ನು ಮಸ್ತಕದಲ್ಲಿ ಬರೆದಿರುತ್ತಾನೋ, ಪುಸ್ತಕದಲ್ಲಿ ಬರೆದಿರುತ್ತಾನೋ?*
ಅವನೆಲ್ಲಿ ಬರೆಯುತ್ತಾನೆ... ತಾಯಿ ತಂದೆಯರು ಬರೆಯುತ್ತಾರೆ, ಗುರುಗಳು ತಿದ್ದುತ್ತಾರೆ, ನಾವು ಅಳಿಸಿಕೊಳ್ಳುತ್ತೇವೆ!

ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ
*ಹುಡುಗಿಯರು ಹೃದಯಕ್ಕೆ ಕೊಳ್ಳಿ ಇಡುವುದೇಕೆ?*
ಅವರು ಕುಳಿತುಕೊಳ್ಳಿ, ಅರ್ಪಿಸಿಕೊಳ್ಳಿ, ಒಪ್ಪಿಸಿಕೊಳ್ಳಿ, ಎನ್ನುವುದನ್ನು ನೀವು ಕೊಳ್ಳಿ ಇಡುವುದು ಎಂದುಬಿಡುವುದೇ...ಛೆ!

ರಮೇಶ್, ಹನುಮನಾಳು
*ದೇವಾಲಯಕ್ಕೆ ಹಾವು ನುಗ್ಗಿದರೆ ದೇವನೇ ಹಾವಿನ ರೂಪದಲ್ಲಿ ಬಂದ ಎನ್ನುತ್ತಾರೆ, ಆದರೆ ಮನೆಗೆ ನುಗ್ಗಿದರೆ?*
ಇವರೇ ಮುಂಗಸಿಯ ರೂಪ ತಾಳಿಬಿಡುತ್ತಾರೆ!

ವಿ.ಹೇಮಂತಕುಮಾರ, ಬೆಂಗಳೂರು
*ನನ್ನ ಬಾಳಿಗೆ ತುಪ್ಪದ ದೀಪವಾಗಿ ಬಂದವಳು ಸೀಮೆಯೆಣ್ಣೆ ಬುಡ್ಡಿಯಾಗಿ ಹೋದಳಲ್ಲ?*
ಛೆ! ನೀವು ಇಷ್ಟೊಂದು ಕಲಬೆರಕೆ ಎಂದು ತಿಳಿದಿರಲಿಲ್ಲ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಭಗವಂತನಿಗೆ ಬ್ರಾಹ್ಮಣರೇ ಅಚ್ಚುಮೆಚ್ಚು! ಯಾಕೆ?*
ಯಾರು ಹೇಳಿದರು? ಕುರುಬನ ಹಾಡಿಗೆ ತಿರುಗಿದ ಕೃಷ್ಣನನ್ನು ಯಾವ ಜಾತಿಯವನೂ ಅತ್ತ ತಿರುಗಿಸಲಾಗಿಲ್ಲ. ದೇವನಿಗೆ ಮುಖ್ಯವಾದುದು ಜಾತಿಯಲ್ಲ, ಭಕ್ತಿ!

ಡಿ.ಎಲ್. ನಾಗರಾಜ್, ಚನ್ನಗಿರಿ
*ಬಡತನಕ್ಕೆ ಬಡತನವೇ ಕಾರಣವೇ?*
ಹಾಗೇನಿಲ್ಲ. ಮತ್ತೊಬ್ಬ ನಮಗಿಂತ ಹೆಚ್ಚು ಶ್ರೀಮಂತನಾದ ಏಕೈಕ ಕಾರಣವೇ ಬಡತನಕ್ಕೆ ಕಾರಣ!

ಪಿ.ಜೆ. ರಾಘವೇಂದ್ರ, ಮೈಸೂರು
*ಪಕ್ಷದಿಂದ ಪಕ್ಷಕ್ಕೆ ಹಾರಿದರೆ ಪಕ್ಷಾಂತರ; ಹಾಗಾದರೆ ಗಂಡಾಂತರ ಎಂದರೇನು?*
ಗಂಡು ಇಂದ ಗಂಡ ಆಗಿ ಬದಲಾಗುವ ಕ್ರಿಯೆಯೇ ಗಂಡಾಂತರ ಉರುಫ್ ಮದುವೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನೀವು ಕೇಳಿದಿರಿಯಲ್ಲಿ ಉತ್ತರಿಸುವವರು ಅಶರೀರರಾಗಿರಲೇಬೇಕೆ ರಾಮ್‌ಜೀ?*
ಹಾಗೇನಿಲ್ಲ. ಕನಿಷ್ಠ ಒಂದು ತಲೆ, ಒಂದು ಕಣ್ಣು, ಒಂದು ಕೈ ಆದರೂ ಇರಲೇಬೇಕು!

## ಬಹುಮಾನಿತ ಪ್ರಶ್ನೆ

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ರಾಮ್, ನೀವು ಎಡಪಂಥೀಯರೋ, ಬಲಪಂಥೀಯರೋ?*
ಕಾರಿನ ಗೇರ್ ಬದಲಾಯಿಸುವಾಗ ಎಡಪಂಥೀಯ, ಸ್ಟೀರಿಂಗ್ ತಿರುಗಿಸುವಾಗ ಬಲಪಂಥೀಯ!

ಮಲ್ಲನಗೌಡ ಸಿ. ಪಾಟೀಲ, ರಂಭಾಪುರ
*ಜಗತ್ತಿನಲ್ಲಿ ಎಲ್ಲರಿಗೂ ಕಾಡುವ ದುಃಸ್ವಪ್ನ ಯಾವುದು?*
ಮದುವೆ!

ಆನಂದ ಸಾಲಿಯಾನ್, ಮೈರ
*ಭಾರತದ ಬಹು ದೊಡ್ಡ ಸಮಸ್ಯೆ ಯಾವುದು?*
ನಿದ್ರೆ!

ಹಾಡ್ಯ ಜಯಾನಂದ, ಮೈಸೂರು
*ಮೊಟ್ಟೆಯಾಯ್ತು, ಟೊಮ್ಯಾಟೋ ಆಯ್ತು, ಈಗ ಶೂ, ಮುಂದೆ...?*



ಕಾರ್ಪೊರೇಷನ್ ಕಸದ ಲಾರಿಯಲ್ಲೇ ಕೂರಿಸಿ ಅಲ್ಲಿರುವುದರಿಂದಲೇ ಅಭಿಷೇಕ!

ವಿ. ಹಮೀದ್, ವಿಟ್ಲ
*ವಿರಾಟನ ಕಾಲದಂತೆ ಈಗ ಗಗನದಿಂದ ರಂಭೆ, ಊರ್ವಶಿ, ಮೇನಕೆ ಭುವಿಗೆ ಇಳಿದುಬಂದರೆ?*
ಕೂಡಲೆ ಐಟಂ ಸಾಂಗ್ ಆಡಿಸಿಬಿಡುತ್ತಾರೆ!

ಸುಶಾನ್ ಪೂಜಾರಿ, ಪಡುಬಿದ್ರಿ
*ಗೋಹತ್ಯೆ ವಿರೋಧಿಸುವ ಮಠಾಧೀಶರು ಬರದಿಂದ ಮೇವಿಲ್ಲದೆ ಕಂಗಾಲಾದ ಜಾನುವಾರುಗಳ ರಕ್ಷಣೆಗೆ ಧಾವಿಸುವುದಿಲ್ಲವೇಕೆ?*
ಅವರು ಗೋಹತ್ಯೆಯನ್ನು ಮಾತ್ರ ವಿರೋಧಿಸುತ್ತಾರೆ; ಹಸಿವಿನಿಂದ ತಾವೇ ಸತ್ತರೆ ಅದು ಹತ್ಯೆಯಲ್ಲವಲ್ಲ!

ಎಂ.ಎನ್. ಸೋಮಶೇಖರ್, ಮೈಸೂರು
*ಪತ್ನಿಯು ಗಂಡನಿಂದ ತನಗೂ, ತನ್ನ ಮಕ್ಕಳಿಗೂ ಏನನ್ನು ಬಯಸುತ್ತಾಳೆ?*
ರಕ್ಷಣೆ, ಪ್ರೀತಿ, ಬ್ಯಾಂಕ್ ಬ್ಯಾಲೆನ್ಸ್, ಆಸ್ತಿ, ವಿಲ್!

■ ರಾಮ್